**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿಸಿ.ನಂ.748/2016**

**ಸಿ.ಡಬ್ಲ್ಯೂ-1**

**ಪಿ.ಡಬ್ಲ್ಯೂ-3**

| | |
|---|---|
| ಸಾಕ್ಷಿಯ ಹೆಸರು | : ಚಂದ್ರಕಾಂತ |
| ತಂದೆ/ಗಂಡನ ಹೆಸರು | : ತಿಪ್ಪೆಸ್ವಾಮಿ |
| ವಯಸ್ಸು | : 45 ವರ್ಷ |
| ಉದ್ಯೋಗ | : ಪಿ.ಐ. |
| ವಾಸಸ್ಥಳ | : ಕರ್ನಾಟಕ ಲೋಕಾಯುಕ್ತ ಬೆಂಗಳೂರು |

**ದಿನಾಂಕ:02-05-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ</u>**

ನಾನು ಮೇ 2015 ರಿಂದ ಜೂನ್ 2017 ರವರೆಗೆ ಚಡಚಣ ವೃತ್ತದಲ್ಲಿ ಸಿ.ಪಿ.ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ19.07.2015 ರಂದು ಬೆಳಿಗ್ಗೆ ನಾನು ಕಚೇರಿಯಲ್ಲಿದ್ದಾಗ ಹಳೆ ದಸೂರ ಗ್ರಾಮದ ಭೀಮಾನದಿಯಲ್ಲಿ 8-10 ಟ್ರ್ಯಾಕ್ಟರಗಳಲ್ಲಿ ಜನರು ಅಕ್ರಮವಾಗಿ ಮರಳು ತೆಗೆಯುತ್ತಿರುವ ಬಗ್ಗೆ ಬಾತ್ಮಿ ಬಂದಿದ್ದು ನಾನು ಪಿ.ಎಸ್.ಐ. ಮತ್ತು ಎ.ಎಸ್.ಐ. ಹಾಗೂ ಸಿಬ್ಬಂದಿಗಳನ್ನು ಹಾಜರುಪಡಿಸಿಕೊಂಡು ಒಟ್ಟು 6 ತಂಡಗಳನ್ನಾಗಿ ಮಾಡಿ 8.10 ಗಂಟೆಗೆ ಕಚೇರಿಯಿಂದ ಸರ್ಕಾರಿ ಜೀಪ ಮತ್ತು ಖಾಸಗಿ ವಾಹನಗಳಲ್ಲಿ ಹಳೆ ದಸೂರ ಗ್ರಾಮಕ್ಕೆ ಹೋಗಿರುತ್ತೇವೆ. ಅಲ್ಲಿ ಇಬ್ಬರು ಪಂಚರಾದ ಚಾಸಾ 2 ಮತ್ತು 3 ರವರನ್ನು ಹಾಜರುಪಡಿಸಿಕೊಂಡು ಅವರಿಗೂ ಬಾತ್ಮಿ ವಿಷಯವನ್ನು ತಿಳಿಸಿ ಅವರು ಪಂಚರಾಗಲು ಒಪ್ಪಿಕೊಂಡ ನಂತರ ನಮ್ಮ ತಂಡದೊಂದಿಗೆ ಪಂಚರನ್ನು ಕರೆದುಕೊಂಡು ಭೀಮಾನದಿಯ ಹತ್ತಿರ ಹೋಗಿ ಅಲ್ಲಿ ಮರಳು ತುಂಬಿದ 1 ಟ್ರ್ಯಾಕ್ಟರನ್ನು ಜಪ್ತಿಮಾಡಿ ಪಂಚರೊಂದಿಗೆ ಪಂಚನಾಮೆ ಮಾಡಿ ಸಿಬ್ಬಂದಿಯೊಂದಿಗೆ ಅದನ್ನು ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ. ಮುಂದುವರೆದು ಅದೇ ಪಂಚರು ಮತ್ತು ಸಿಬ್ಬಂದಿಯೊಂದಿಗೆ ಮರಳು ತುಂಬುತ್ತಿದ್ದ ಮತ್ತೊಂದು ಟ್ರ್ಯಾಕ್ಟರ ಹತ್ತಿರ ಹೋಗಲು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಮರಳು ತುಂಬುತ್ತಿದ್ದವರು ನಮ್ಮ ಕಡೆ ಕಲ್ಲುಗಳನ್ನು ಎಸೆಯುತ್ತಾ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ.

ನಂತರ ನಾವು ಅವರನ್ನು ಹಿಡಿಯಲು ಹೋದಾಗ ಅವರು ಟ್ರ್ಯಾಕ್ಟರನ್ನು ಬಿಟ್ಟು ತಪ್ಪಿಸಿಕೊಂಡು ಹೋಗಿರುತ್ತಾರೆ. ಪಂಚರ ಸಮಕ್ಷಮ ಸದರಿ ಟ್ರ್ಯಾಕ್ಟರ ಮತ್ತು ಮರಳಿನ ಪಂಚನಾಮೆ ಮಾಡಿ ನಂಬರ ಪ್ಲೇಟ ಇಲ್ಲದ ಮಹಿಂದ್ರಾ ಅರ್ಜುನ ಕಂಪನಿಯ ಟ್ರ್ಯಾಕ್ಟರ ನಂ. ಎನಪಿಸಿಎ000 ಜೆಸಿ. ಸುಮಾರು 1 ಬ್ರಾಸ ರಷ್ಟು ತುಂಬಿದ ಮರಳು ಮತ್ತು ನಮ್ಮ ಮೇಲೆ ತುರಾಟ ಮಾಡಿದ 2 ಹಿಡಿಗೈ ಗಾತ್ರದ ಕಲ್ಲುಗಳನ್ನು ಜಪ್ತಿಮಾಡಿಕೊಂಡು ಪಂಚನಾಮೆಯನ್ನು 11.45 ರಿಂದ 12.45 ರ ವರೆಗೆ ಮಾಡಿ ಟ್ರ್ಯಾಕ್ಟರ ಹಾಗೂ ಪಂಚನಾಮೆಯೊಂದಿಗೆ ಹಾಜರಾಗಿ ಚಾಸಾ 7 ರವರಿಗೆ ದೂರು ನೀಡಿರುತ್ತೇನೆ. ದಿಃ04.08.2015 ರಂದು ಚಾಸಾ 8 ರವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನಿ.ಪಿ.1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1(ಬಿ) ಎಂದು, ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು, ಸಾಕ್ಷಿಯು ಪ್ರ.ವ.ವ.ವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 2 ಹಿಡಿಗೈ ಗಾತ್ರದ ಕಲ್ಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: 1 ನೇ ಆರೋಪಿ ಪರ ಶ್ರೀ.ಎಮ್.ಸಿ.ಬಿ. ವಕೀಲರಿಂದಃ**

ನಾವು ಘಟನಾ ಸ್ಥಳಕ್ಕೆ ಹೋದಾಗ ಆರೋಪಿತರು ಇರಲಿಲ್ಲ ಎಂದರೆ ಸರಿಯಲ್ಲ. ನಾವು ಘಟನಾ ಸ್ಥಳಕ್ಕೆ 09.00 ಗಂಟೆಗೆ ಹೋಗಿರುತ್ತೇವೆ. ಪಂಚರನ್ನು ನಾನೇ ಕರೆದುಕೊಂಡು ಬಂದಿರುತ್ತೇನೆ. ಖಾಸಗಿ ವಾಹನ ಮತ್ತು ಸರ್ಕಾರಿ ವಾಹನದ ನಂಬರನ್ನು ನಿ.ಪಿ.2 ರಲ್ಲಿ ಬರೆದಿರುತ್ತಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾವು ಹೋಗಿರುವ ಗಾಡಿಯ ನಂಬರನ್ನು ಬರೆದಿರುತ್ತೇವೆ ಎಂದು ನುಡಿಯುತ್ತಾರೆ. ದೂರನ್ನು ಸಂಜೆ 5 ಗಂಟೆಗೆ ನೀಡಿರುತ್ತೇನೆ. ನಾನು ಆ ದಿನ ದಾಳಿ ಮತ್ತು ಪಂಚನಾಮೆಯನ್ನು ಮುಗಿಸಿಕೊಂಡು ಠಾಣೆಗೆ 5 ಗಂಟೆಗೆ ಬಂದಿರುತ್ತೇನೆ. ಈ ಪ್ರಕರಣದಲ್ಲಿ ಚಾಸಾ 8 ರವರು ತನಿಖಾಧಿಕಾರಿ ಇರುತ್ತಾರೆ. ನನ್ನ ಜೊತೆ ಪಂಚರು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆಯಾದ ನಂಬರ ಆರೋಪಿತರನ್ನು ಎಷ್ಟು ದಿನದ ಮೇಲೆ ಹಿಡಿದಿರುತ್ತಿರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಹಿಡಿದಿಲ್ಲವೆಂದು ನುಡಿಯುತ್ತಾರೆ. ಸದರಿ ಜಪ್ತಿಪಡಿಸಿಕೊಂಡ ಟ್ರ್ಯಾಕ್ಟರನ ಮಾಲೀಕರು ಯಾರು ಎಂದು ನಾನು ವಿಚಾರಣೆ ಮಾಡಿಲ್ಲ. ನಾನು ದಾಳಿ ಮಾಡಿರುವುದಿಲ್ಲ ಎಂದರೆ



ಸರಿಯಲ್ಲ. ನನ್ನ ಜೊತೆ ಸಿಬ್ಬಂದಿಗಳು ಮತ್ತು ಪಂಚರನ್ನು ಕರೆದುಕೊಂಡು ಹೋಗಿರುತ್ತೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅಲ್ಲಿ ಮರಳನ್ನು ತುಂಬುತ್ತಿದ್ದರು ನಮ್ಮನ್ನು ನೋಡಿ ಕಲ್ಲನ್ನು ಎಸೆದು ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದು ಹಾಗೂ ಓಡಿ ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ರಂತೆ ಬೇರೆ ಕಡೆ ಸಿಗುತ್ತವೆ ಎಂದರೆ ಸರಿ. ಸರ್ಕಾರಕ್ಕೆ ಅಂಕಿ ಸಂಖ್ಯೆಗಳನ್ನು ತೋರಿಸಲು ಈ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 2 ನೇ ಆರೋಪಿ ಪರ ಶ್ರೀ.ಎಸ್.ಎಲ್.ಎನ್. ವಕೀಲರಿಂದಃ**

**1 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು 2 ನೇ ಆರೋಪಿಯ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**